ಈ) ಈ ತೊಂದರೆ ನಿವಾರಣೆ ಮಾಡಲು ಸರ್ಕಾರದವರು ಕೈಕೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 98 ಎಕರೆ $18\frac{1}{2}$ ಸೆಂಟ್ಸ್

ಆ) ರೂ. 36,58,691-00 ಗಳ ಮುಂಗಡ ಪರಿಹಾರವನ್ನು 33 ಜನರಿಗೆ ಪಾವತಿ ಮಾಡಲಾಗಿದೆ. ಉಳಿದ ಹಣವನ್ನು ಐತೀರ್ಪು ಅನುಮೋದನೆಯ ನಂತರ ನೀಡಲಾಗುವುದು.

ಇ) ನೀರು ಹೋಗಲು ಸಾಕಷ್ಟು ಸ್ಥಳಾವಕಾಶ ಕಲ್ಪಿಸಲಾಗಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಮುಲ್ಕಿ ಮತ್ತು ಮೂಡಬಿದ್ರಿ ತಾಲ್ಲೂಕು ರಚನೆ

783 - ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ-ಮೂಡಬಿದ್ರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ನೇಮಿಸಿರುವ ತಾಲ್ಲೂಕು ಪುನರ್ವಿಂಗಡಣಾ ಸಮಿತಿಗಳು ಮುಲ್ಕಿ ಮೂಡಬಿದ್ರಿ ತಾಲ್ಲೂಕುಗಳಾಗಬೇಕೆಂದು ಶಿಫಾರಸ್ಸು ಮಾಡಿರುವರೆ?

ಆ) ಜನರು ಬಹಳ ದೂರದ ತಾಲ್ಲೂಕು ಕೇಂದ್ರಗಳಿಗೆ ತಮ್ಮ ಕೆಲಸಗಳಿಗಾಗಿ ಅಲೆದಾಡಬೇಕಾಗಿರುವುದರಿಂದ ಸರ್ಕಾರ ಯಾವಾಗ ಇವುಗಳನ್ನು ತಾಲ್ಲೂಕುಗಳಾಗಿ ಪರಿವರ್ತಿಸಲಿದ್ದಾರೆ

ಇ) ಇವು ತಾಲ್ಲೂಕು ಕೇಂದ್ರಗಳಾಗುವುದರಿಂದ ಸರ್ಕಾರ ಈ ಬಗ್ಗೆ ಪೂರ್ವಭಾವಿ ಯೋಜನೆಯನ್ನು ತಯಾರಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿಶೀಲಿಸಲಾಗುತ್ತಿದೆ.

ಕೈಗಾರಿಕಾ ಉದ್ದೇಶಗಳಿಗಾಗಿ ಸ್ಟಾಂಪು ಶುಲ್ಕ ವಿನಾಯಿತಿ

798 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಹೊಸ ಕೈಗಾರಿಕಾ ನೀತಿಯಲ್ಲಿ ಕೆಲವೊಂದು ವಲಯದಲ್ಲಿ ಕೈಗಾರಿಕಾ ಉದ್ದೇಶಗಳಿಗಾಗಿ ಭೂಮಿಯ ಪರಿವರ್ತನೆ ನೋಂದಣಿ ಸ್ಟಾಂಪು ಶುಲ್ಕ ವಿನಾಯಿತಿಯನ್ನು ಪ್ರಕಟಿಸಲಾಗಿತ್ತೆ?

ಆ) ಹಾಗಿದ್ದಲ್ಲಿ, ಆ ವಲಯಗಳ ಹೆಸರುಗಳನ್ನು ಕಂದಾಯ ಇಲಾಖೆಯಿಂದ ಈ ಬಗ್ಗೆ ಅಧಿಕೃತ ಸೂಚನೆ ಹೊಡಿಸಬೇಕಾಗಿರುವುದು ನಿಜವೇ?

ಇ) ಅಧಿಕೃತ ಸೂಚನೆ ಹೊರಡಿಸದಿದ್ದರೆ ಆದೇಶ ದಿನಾಂಕ ಹಾಗೂ ಸಂಖ್ಯೆ: ಏನು ಹೊರಡಿಸದಿದ್ದರೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಹೌದು

ಇ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯೊಡನೆ ಸಂಪರ್ಕಿಸಿ ಸೂಕ್ತ ಆದೇಶವನ್ನು ಜರೂರು ಹೊರಡಿಸಲಾಗುವುದು.